Reg. No B G 155 10-2-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ ಧರ್ಮಪ್ರಚಾರಾಗ್ರಣಿ ಎಂ. ಎಸ್. ಕೃಷ್ಣರಾವ್ [2 ಪುಸ

ಬೊಂಬಾಯಿನಲ್ಲಿ ಶಿವಸೇನಾ ಹಾವಳಿ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀನುಸ್ಮಹಾರಾಜರು, ಮತ್ತಿತರ ಗಣ್ಯರು ಅಭಿಸಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ. ಇರಾನಿಯವರು, ಶ್ರೀ ಮಾಧವ್ ಶಿನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೇರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆವೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಪೌರಸಭಾ ಕಾಂಗ್ರೆಸ್ ಪಕ್ಷ

ಮೈಸೂರು:— ಪೌರಸಭಾ ಕಾಂಗ್ರೆಸ್ ಪಕ್ಷಕ್ಕೆ ಶ್ರೀಗಳಾದ ಬಿ. ಸಿ. ಲಿಂಗಯ್ಯನವರು ಲೀಡರ್, ಕೆ. ಎಂ. ಸೋಮಸುಂದರ ಶರ್ಮರು ಡೆಪ್ಯೂಟಿ ಲೀಡರ್, ಜೋಗಿ ಸಿದ್ದಯ್ಯರು ಸೆಕ್ರೆಟರಿ, ಎಂ. ಎಲ್. ರಾಜಶೇಖರ ಟ್ರೆಜರರ್, ಎಂ. ಇ. ಗಣೇಶರಾವ್‌ರು ವ್ಹಿಪ್ ಆಗಿ ಚುನಾಯಿಸಲ್ಪಟ್ಟಿರುವರು.

ತಿಮಿಂಗಲಕ್ಕೆ ಆಪರೇಷನ್

ಪೈಗ್ನಟ್ಟ (ಇಂಗ್ಲೆಂಡ್)— ಪ್ರಾಣಿ ಪ್ರದರ್ಶನಾಲಯದಲ್ಲಿನ ಪರ್ಸಿ ಎಂಬ 6 ಅಡಿಯ ತಿಮಿಂಗಲವು 1 ತಿಂಗಳಿಂದ ಪಾಯಿಲೆಯಾಗಿದ್ದು ಆಹಾರ ಸ್ವೀಕರಿಸುತ್ತಿರಲಿಲ್ಲ — ಪ್ರಾಣಿ ವೈದ್ಯರು ಹೃದಯದ ಮೇಲೆ ಶಸ್ತ್ರಚಿಕಿತ್ಸೆ ನಡೆಸಿದರು — ಹುಷಾರಾಗುತ್ತಿದೆ.

ನವದೆಹಲಿ— ಅಖಿಲಭಾರತ ಪಾನನಿರೋಧ ಸಮಿತಿಯು ಡೆಲ್ಲಿ ಮತ್ತು ನವ ಡೆಲ್ಲಿಯಲ್ಲಿನ ಮದ್ಯದ ಅಂಗಡಿಗಳ ಮುಂದೆ ಪಾನನಿರೋಧ ಸಮಿತಿಯವರು ಮೌನದಿಂಹ ಪ್ರದರ್ಶನ ನಡೆಸಿದರು.

ಕೋಲಾರ— ವಿವಾಹ ತಂಡವಿದ್ದ ಒಂದು ಕಾರು ಪಾಲಮನ್ನಾರ್ ಹತ್ತಿರ ಒಂದು ಬಸ್ಸಿಗೆ ಡಿಕ್ಕಿಹೊಡೆದು ಆದರಲ್ಲಿದ್ದ ವಧು, ಆಕೆಯ ತಂದೆತಾಯಿ ಸೇರಿ 9 ಜನ ಸತ್ತು ಮತ್ತಿಬ್ಬರು ಗಾಯಗೊಂಡರು.

ಶಿವಸೇನಾ ಹಾವಳಿ

ಬೊಂಬಾಯಿ— ಶಿವಸೇನಾ ಮತ್ತು ಅದರ ಜೆಂಬಲಿಗರ ಹಾವಳಿ ಪರಿಣಾಮವಾಗಿ ನಿನ್ನೆ ರಾತ್ರಿ 8 ರಿಂದ ಇಂದು ಬೆಳಿಗೆ 5 ರವರೆಗೆ ಕರ್ಫ್ಯೂ ಜಾರಿ ಮಾಡಲಾಯಿತು — ಮಾಹಿಮ್ ಸ್ಟೇಷನ್ ಸುಡಲು ಪ್ರಯತ್ನಿಸಿದ ಗುಂಪಿನಮೇಲೆ ಗೋಳೀಬಾರು ನಡೆದು ಇಬ್ಬರು ಸತ್ತರು — ಹಾರ್ಡಿಂಜು ರಸ್ತೆಯಲ್ಲಿ ಗೋಳೀಬಾರ್‌ನಿಂದ ಒಬ್ಬ ಮಹಿಳೆ ಸತ್ತಳು — ಕಲ್ಲು ಎಸೆತದಲ್ಲಿ ನಿರತರಾಗಿದ್ದ ಗುಂಪಿನ ಮೇಲೆ ಸೆಪ್ರಿಯಲ್ಲೂ, ಉತ್ತರ ಬೊಂಬಾಯಿನ ಇತರ ಕಡೆಗಳಲ್ಲೂ ಮಾಡಿದ ಗೋಳೀಬಾರ್‌ನಿಂದ 4 ಮಂದಿ ಸಾವು 20 ಸೋವು ಸಂಭವಿಸಿದವು — 20 ಮುನಿಸಿಪಲ್ ಬಸ್ ಒಂದು ಖಾಸಗಿ ವಾಹನ ಸುಡಲ್ಪಟ್ಟಿತು — ವಾರ್ಲಿಯಲ್ಲಿ ಸೆಂಚುರಿ ಬಜಾರ್ ಲೂಟಿಮಾಡಲ್ಪಟ್ಟಿದೆ — ಶಿವಾಜಿ ಪಾರ್ಕಿನಲ್ಲಿ ಅಗ್ನಿ ಸ್ಪರ್ಶ ಪ್ರಯತ್ನ ನಡೆಸುತ್ತಿದ್ದ ಗುಂಪಿನ ಮೇಲೆ ನಡೆಸಲಾದ ಗೋಳೀಬಾರ್‌ನಲ್ಲಿ ಒಬ್ಬ ಸತ್ತ — ಉತ್ತರ ಬೊಂಬಾಯಿನಲ್ಲಿ ಬೇರೆಬೇರೆ ಸ್ಥಳಗಳಲ್ಲಿ ನಾಲ್ಕು ಪೋಲೀಸು ಚೌಕಗಳು ಸುಡಲ್ಪಟ್ಟವು — ಸೆಂಚುರಿ ಬಜಾರು ಹತ್ತಿರ ಗುಂಪು ಚದುರಿಸಲು ಪೋಲೀಸರು ಗುಂಡುಹಾರಿಸಿದರು — 40 ಹಾಲಿನ ಅಂಗಡಿಗಳು ಸುಡಲ್ಪಟ್ಟವು — 600 ಮಂದಿಯನ್ನು ಬಂಧಸ್ತಗಿರಿ ಮಾಡಲಾಗಿದೆ — ಶಿವಸೇನಾ ಮುಖಂಡ ಬಾಳ ಥ್ಯಾಕರ್ಸಿ, ಮುನಿಸಿಪಲ್ ಕಾರ್ಪೋರೇಷನ್ ಶಿವಸೇನಾ ಪಕ್ಷದ ನಾಯಕ ಮನೋಹರ್ ಜೋಷಿ, ಶಾಸಕ ದತ್ತಾಜಿ ಸಾಯ್ವಿ ಸ್ಥಾನಬದ್ಧ ಶಾಸನರೀತ್ಯಾ ಬಂಧಿಸಲ್ಪಟ್ಟರು — ವಿವಿಧ ತಕ್ಸೀರುಗಳಿಗಾಗಿ ಶಾಸಕರೂ ಸೇರಿ ಅನೇಕ ಸ್ವಯಂಸೇವಕರ ದಸ್ತಗಿರಿಯಾಗಿದೆ — ಸುಡಲ್ಪಟ್ಟ ಮುನಿಸಿಪಲ್ ಬಸ್ಸುಗಳ ಜೊತೆಗೆ 125 ಬಸ್ಸುಗಳು ಡ್ಯಾಮೇಜಾಗಿವೆ — ರೈಲು ಓಡಾಟ ಆತಂಕಗೊಂಡಿದೆ — ರೈಲು ಆಸ್ತಿಪಾಸ್ತಿ ನಷ್ಟ ಪಡಿಸಲು ಪ್ರಯತ್ನ ನಡೆದವು — ಕರೆಕೆಡ್ ರೈಲ್ವೆ ಸ್ಟೇಷನ್ನಿಗೆ ಗುಂಪು ನುಗ್ಗಿ ಟಿಕೀಟು ಕಲೆಕ್ಟರನ್ನು ಹೊಡೆದು ಪಿಠೋಪಕರಣಗಳನ್ನು ಸುಟ್ಟು ಅಲ್ಲಿ ಸಿಕ್ಕಿದ ರೂ 200 ಅಪಹರಿಸಲ್ಪಟ್ಟಿತು — ಬೈಕುಲಾ ಸ್ಟೇಷನ್ನಿನಲ್ಲಿ ಒಂದನೇ ತರಗತಿ ಗಾಡಿಯು ಸುಡಲ್ಪಟ್ಟಿದೆ.

ಪೂನಾದಲ್ಲಿ ಶ್ರೀ ಚವಣರು ಮದ್ರಾಸಿನಿಂದ ವಿಮಾನದಲ್ಲಿ ಬಂದಾಗ ಯರವಾಡ ಜೈಲು ಭಾಗದಲ್ಲಿನ ಕಸ್ತೂರಿಬಾ ಚೌಕದಲ್ಲಿ ಶಿವಸೇನಾ ಪ್ರದರ್ಶನ ನಡೆಸಲಿದ್ದ 25 ಮಂದಿಯನ್ನು ಪೋಲೀಸರು ಹಿಡಿದರು

ಬೆಳಗಾಂನಲ್ಲಿ, ಶಿವಸೇನಾ ಮೇಲಿನ ಗೋಳಿಬಾರನ್ನು ಪ್ರತಿಭಟಿಸಿ, ಮಹರಾಷ್ಟ್ರ ಏಕೀಕರಣ ಸಮಿತಿ ಹರತಾಳಕ್ಕೆ ಕರೆಇತ್ತಿತ್ತು — ಉಪಪ್ರಧಾನಿ ದೇಸಾಯರವರು ಒಂದಾಗ ಕರಾಳ ಧ್ವಜ ಪ್ರದರ್ಶನವಿತ್ತು.

★

ತಮಿಳುನಾಡಿಗೆ ಹೊಸ ಮುಖ್ಯ ಮಂತ್ರಿ

ಮದರಾಸು— ಈಗ ಕಾಂಗ್ರೆಸಿನ ಇಲಾಖಾ ಮಂತ್ರಿಯಾಗಿದ್ದ ಶ್ರೀ ಕರುಣಾನಿಧಿಯರು ಮುಖ್ಯಮಂತ್ರಿಯಾಗಿ ಚುನಾಯಿತರಾದರು.

ಆಹ್ಲಾದಕರ ಸುವಾಸನೆ

ಮೈಸೂರು ಗಂಧದ ಎಣ್ಣೆಯು ತನ್ನ ಶ್ರೇಷ್ಠತೆಯಿಂದ ಜಗದ್ವಿಖ್ಯಾತಿಯನ್ನು ಪಡೆದಿದೆ.

★

ಪರಿಶುದ್ಧವಾದ ಗಂಧದ ಎಣ್ಣೆಯು ಮೈಸೂರು ಸರ್ಕಾರದ ಸೀಲು ಮತ್ತು ಲೇಬಲ್‌ಗಳುಳ್ಳ ಸೀಸೆಗಳಲ್ಲಿ ಮಾತ್ರ ದೊರೆಯುತ್ತವೆ.

ಮೈಸೂರು ಸರಕಾರದ ಗಂಧದ ಎಣ್ಣೆ ಕಾರ್ಖಾನೆ.
ಮೈಸೂರು ಮತ್ತು ಶಿವಮೊಗ್ಗ

ಅಪರಾಧಿಗಳಿಗೆ ಪುರುಷಶಕ್ತಿ ನೀಗುವ ಗುಳಿಗೆ

ಹ್ಯಾಂಬರ್ಗ್ (ಜರ್ಮನಿ)— ಸಾಮಾನ್ಯವಾಗಿ ಸ್ತ್ರೀಯರ ಮೇಲೆ ಲೈಂಗಿಕ ಅತ್ಯಾಚಾರ ನಡೆಸಿದ ವ್ಯಕ್ತಿಯನ್ನು ವಿಚಾರಣೆ ನಡೆಸಿ ಕಾನೂನಿನಂತೆ ಶಿಕ್ಷೆ ವಿಧಿಸುವುದು ರೂಢಿಯಲ್ಲಿದೆ. ಆದರೆ ಅಂಥ ಅಪರಾಧಿಗಳು ಕಾರಾಗೃಹದಿಂದ ಹಿಂದುರಿಗಿದ ನಂತರವೂ ಆ ಕಾರ್ಯವನ್ನು ಮಾಡುತ್ತಿರುವದೆನ್ನು ತಡೆಗಟ್ಟಲು ಶಿಕ್ಷೆಯನ್ನು ಅನುಭವಿಸುವ ಕಾಲದಲ್ಲಿಯೇ ಅವರ ಲೈಂಗಿಕ ಉತ್ಸಾಹ ಕಡಮೆ ಮಾಡುವ ಅಥವಾ ತೆಗೆದು ಹಾಕುವ ಔಷಧವನ್ನು ಇತ್ತೀಚೆಗೆ ಜರ್ಮನಿಯಲ್ಲಿ ಉಪಯೋಗಿಸಲಾಗುತ್ತಿದೆ. ಈಗ ಕಳೆದ ಎರಡು ವರ್ಷಗಳಿಂದ ಏಸ್ ಎಚ್ 714 ಮಾತ್ರೆಯನ್ನು ಪ್ರಯೋಗಿಸಿ ಲೈಂಗಿಕ ಅತ್ಯಾಚಾರಿಗಳಿಗೆ, ಶಿಕ್ಷೆಯ ಜೊತೆಗೆ ಅವರ ಸೇವನೆಯನ್ನು ಮಾಡುವ ಔತ್ತುಯನ್ನು ನೀಡುತ್ತಿದ್ದಾರೆ. ಮಾತ್ರೆಗಳಲ್ಲದಿದ್ದರೆ ಚುಚ್ಚುಮದ್ದನ್ನು ನೀಡುತ್ತಿದ್ದರೆ. (ಯ್ಯೂ ಪಿ ಎಸ್)

★

ವಿವಾಹ ಮಹೋತ್ಸವಗಳು

[ನೂತನ ದಂಪತಿಗಳಿಗೆ ನಮ್ಮ ಶುಭಾಶಯಗಳು]

ಚಿ ॥ ಡಾ ॥ ಕೆ. ಆರ್. ಕಾಮತ್ (ದಿ ॥ ಡಾ ॥ ಕೆ. ಜೆ. ಕಾಮತ್‌ರವರ ಪುತ್ರ) ಮತ್ತು ಚಿ ॥ ಸೌ ॥ ಕಾಮಾಕ್ಷಿ (ಶ್ರೀ ಮಾಧವ ಶೆಣೈರವರ ಪುತ್ರಿ) ಇವರ ವಿವಾಹಮಹೋತ್ಸವವು ಶುಕ್ರವಾರ ವೈಭವವಾಗಿ ನೆರವೇರಿತು.

ಚಿ ॥ ಹೆಚ್. ಆರ್. ಜ್ಞಾನೇಶ್ವರರಾವ್, ಬಿ. ಕಾಂ (ಶ್ರೀ ಹೆಚ್. ಡಿ. ರಾಮ್ಯರಾವ್‌ರವರ ಪುತ್ರ) ಮತ್ತು ಸೌ ॥ ಪ್ರಮೀಳ, ಬಿ. ಎ (ಶ್ರೀ ಡಿ. ಇ. ರುಕ್ಮಾಜೀರಾವ್‌ರವರ ಪುತ್ರಿ) ಇವರ ವಿವಾಹಮಹೋತ್ಸವವು ಶುಕ್ರವಾರ ವೈಭವವಾಗಿ ನೆರವೇರಿತು.

ಚಿ ॥ ಕೆ. ಎಸ್. ರಘು [ಇಂಡಿಯನ್ ಏರ್ ಫೋರ್ಸ್] (ದಿ ॥ ಕೆ. ವಿ. ಸುಬ್ಬಕೃಷ್ಣಪ್ಪನವರ ಪುತ್ರ) ಮತ್ತು ಸೌ ॥ ವಸಂತ (ಶ್ರೀ ಹೆಚ್. ನಾಗರಾಜರವರ ಪುತ್ರಿ) ಇವರ ವಿವಾಹಮಹೋತ್ಸವವು ಭಾನುವಾರ ವೈಭವವಾಗಿ ನೆರವೇರಿತು.

SHAKTI
SUDHA
A Superb Tonic

ಆಶೋಕ ಮಜೆನ್‌ಸೀನ್
ಎಲ್ಲ ವಿಧ ಆಯುರ್ವೇದ ಔಷಧಗಳೂ ಸನ್ನಿಧಿಯಲ್ಲಿ ದೊರೆಯುತ್ತವೆ

Protect the Cow

Edited, Printed & Published by Dharmaprachara Niratha M S Krishna Rao (Proprietor) at the Satyavadi Press Chamarajapuram. Mysoe 4

ಪುಡ್‌ಲಾಂಡ್ 7-2-69 ರಿಂದ

.... ಮನಮೋಹಕ ಹಿಂದಿ ಚಿತ್ರ ....

ದಿವಾನ ★ DIWANA

ಹಾಸ್ಯಶಿಖಾಮಣಿ ರಾಜ್ ಕಪೂರ್, ಸೌಂದರ್ಯರಾಣಿ ಸೈರಾಬಾನು ಅಭಿನಯದ ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಚಿತ್ರ

ಸಂಗೀತ— ಶಂಕರ್ ಜೈಕಿಷನ್ ಡೈರೆಕ್ಷನ್— ಮೆಹೇಶ್ ಕೌಲ್

[ದಿನ 3 ಪ್ರದರ್ಶನಗಳು]

ಆಪೆರಾ— ಜನಪ್ರಿಯ 3 ನೇ ವಾರ

— ಅತ್ಯಮೋಘ ತಮಿಳು ಚಿತ್ರ —

ಒಳವಿಳಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore. 4.